ಸಿನಿಮಾ ಕ್ಷೇತ್ರಗಳಿಗೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಯುವಜನರು ಬರುತ್ತಿದ್ದಾರಲ್ಲವೇ?' ಎಂಬ ಪ್ರಶ್ನೆಗೆ ಅವರು, 'ಮೊದಲೂ ಇಷ್ಟೇ ಜನರು ಬರುತ್ತಿದ್ದರು' ಎಂದರು.

'ಈಗ ಸಿನಿಮಾ ರಂಗ ಪ್ರವೇಶಿಸುವವರಲ್ಲಿ ಸಿದ್ಧತೆಯ ಕೊರತೆ ಎದ್ದು ಕಾಣುತ್ತದೆ. ಸಿನಿಮಾ, ರಂಗಭೂಮಿ ಇವೆಲ್ಲ ಹೆಚ್ಚು ಬೇಗ ಜನಪ್ರಿಯತೆ ಕೊಡುತ್ತವೆ ಎಂಬ ಕಾರಣಕ್ಕೆ ಹೋಗಿರುತ್ತಾರೆ. ಆದರೆ ಒಂದು ಸಿನಿಮಾ ಮಾಡಬೇಕಾದರೆ ಅದರ ಹಿಂದೆ ಎಷ್ಟು ಕೆಲಸ ಮಾಡಿರಬೇಕು ಎಂಬ ಬಗ್ಗೆ ಅವರಿಗೆ ತರಬೇತಿ ಇರುವುದಿಲ್ಲ' ಎಂದ ಅವರು, 'ಪಿ. ಲಂಕೇಶರು ಸಿನಿಮಾ ಮಾಡುವಾಗ ಆ ಮಾಧ್ಯಮದ ಬಗ್ಗೆ ಪೂರ್ತಿಯಾಗಿ ತಿಳಿದುಕೊಂಡಿದ್ದರು. ಅದರ ಎಲ್ಲ ವಿಭಾಗಗಳ ಬಗ್ಗೆಯೂ ತಿಳಿದುಕೊಂಡಿದ್ದರು. ಅಂಥ ಪ್ರಯತ್ನಗಳು ಈಗ ಇಲ್ಲವಲ್ಲ' ಎಂದು ಉದಾಹರಣೆಯ ಸಮೇತ ವಿವರಿಸಿದರು.

'ಆದರೆ ನಮ್ಮಲ್ಲಿ ಹಾಗೆ ಸಿನಿಮಾ ಮಾಧ್ಯಮಕ್ಕೆ ಆಸಕ್ತರನ್ನು ಸಿದ್ಧಮಾಡುವಂಥ ಒಳ್ಳೆಯ ಇನ್‌ಸ್ಟಿಟ್ಯೂಟ್‌ಗಳು ಎಲ್ಲಿವೆ?'

ಈ ಪ್ರಶ್ನೆಯ ಚುಂಗು ಹಿಡಿದ ಕಾಸರವಳ್ಳಿ ಅಂತರ್ಜಾಲವೆಂಬ ಆಧುನಿಕ ವಿಶ್ವವಿದ್ಯಾಲಯದ ಕಡೆಗೆ ಬೊಟ್ಟುಮಾಡಿದರು. 'ಮೊದಲು ಒಂದು ಒಳ್ಳೆಯ ಸಿನಿಮಾ ನೋಡಬೇಕು ಎಂದರೆ ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್‌ಗೆ ಹೋಗಿ, ನ್ಯಾಷನಲ್ ಫಿಲ್ಮ್ ಆರ್ಕೈವ್ಸ್‌ಗೇ ಹೋಗಬೇಕಿತ್ತು. ಆದರೆ ಈಗ ಜಗತ್ತಿನ ಶ್ರೇಷ್ಠ ನಿರ್ದೇಶಕನ ಸಿನಿಮಾಗಳು ರಸ್ತೆ ಬದಿಯಲ್ಲಿಯೂ ಸಿಗುತ್ತವೆ. ಅಂತರ್ಜಾಲದಲ್ಲಿಯಂತೂ ಎಲ್ಲ ರೀತಿಯ ಮಾಹಿತಿಗಳೂ ಇರುತ್ತವೆ. ಹಾಗೆಯೇ ಸಿನಿಮಾಗಳನ್ನು ನೋಡಿದರಷ್ಟೇ ಸಾಲದು. ಅದರ ವಿಮರ್ಶೆಯನ್ನೂ ಓದಬೇಕು. ಆಗ ಆ ಸಿನಿಮಾವನ್ನು ಇನ್ನಷ್ಟು ಆಳವಾಗಿ ಅರ್ಥೈಸಿಕೊಳ್ಳಬಹುದು. ಸಿನಿಮಾಗಳ ಹಾಗೆಯೇ ಗಂಭೀರ ಸಿನಿಮಾ ಪತ್ರಿಕೆಗಳೂ ಅಂತರ್ಜಾಲದಲ್ಲಿ ಸುಲಭವಾಗಿ ಸಿಗುತ್ತವೆ. ಅವನ್ನು ಬಳಸಿಕೊಂಡು ಬೆಳೆಯಬೇಕು' ಎನ್ನುವ ಕಾಸರವಳ್ಳಿ, 'ಕನ್ನಡದಲ್ಲಿ ಸಿನಿಮಾಗಳ ಬಗೆಗಿನ ಗಂಭೀರ ಬರಹಗಳಿಗೆ ಜಾಗ ಇಲ್ಲ' ಎನ್ನುವ ಕೊರತೆಯ ಕಡೆಗೂ ಗಮನ ಸೆಳೆದರು. ಅವರ ಮಾತನ್ನೇ ಮುಂದುವರಿಸಿದ ಪೈಗಳು, 'ಸಿನಿಮಾಕ್ಕಾಗಿ ಒಂದು ಗಂಭೀರ ಪತ್ರಿಕೆ ಇಲ್ಲ. ಇರುವ ಪತ್ರಿಕೆಗಳಲ್ಲಿ ಬರುವ ವಿಮರ್ಶೆ ಆಳವಾದದ್ದಲ್ಲ. ಅರ್ಧ ಕತೆ ಹೇಳಿ, ಅವನ ನಟನೆ ಚೆನ್ನಾಗಿತ್ತು, ಇವನ ಸಂಗೀತ ಚೆನ್ನಾಗಿದೆ ಅಂತ ಬರೆದುಬಿಟ್ಟರೆ ಅದು ವಿಮರ್ಶೆ ಆಗುವುದಿಲ್ಲ. ಸಿನಿಮಾವನ್ನು ಯಾವ ಪರಿಕರಗಳನ್ನು ಬಳಸಿಕೊಂಡು ಹೇಗೆ ರೂಪಿಸಿದ, ವಸ್ತುವನ್ನು ಯಾವ ರೀತಿ ನಿರೂಪಿಸಿದ್ದಾನೆ ಎನ್ನುವುದನ್ನು ವಿಶ್ಲೇಷಿಸುವಂಥ ಬರಹ ಬೇಕು. ಅಂಥದ್ದೊಂದು ಬರಹಕ್ಕೆ ವೇದಿಕೆ ಕನ್ನಡದಲ್ಲಿ ಇಲ್ಲ' ಎಂದರು.

ವಿಮರ್ಶೆಯ ವಿಸ್ತಾರದ ಬಗ್ಗೆಯೇ ಇನ್ನಷ್ಟು ಚರ್ಚೆಯನ್ನು ಬೆಳೆಸಿದ ಕಾಸರವಳ್ಳಿ ಹೀಗೆಂದರು: 'ಒಬ್ಬ ಸಾಹಿತಿ ಹತ್ತು ಕೃತಿ ರಚಿಸಿದರೆ, ಸಿನಿಮಾ ನಿರ್ದೇಶಕ ಹತ್ತು ಸಿನಿಮಾ ಮಾಡಿದರೆ, ಅವೆಲ್ಲವೂ ಬೇರೆ ಬೇರೆ ಅಲ್ಲ. ಅದಕ್ಕೆ ಸಿನಿಮಾ ವಿಮರ್ಶೆಯಲ್ಲಿ 'ಓರ್' ಅಂತೊಂದು ಶಬ್ದವಿದೆ. ಅಂದರೆ ಅವನು ತನ್ನ ಎಲ್ಲ ಸಿನಿಮಾಗಳ ಮೂಲಕ ಒಂದು ಪ್ರಪಂಚವನ್ನು ಕಟ್ಟುತ್ತಿರುತ್ತಾನೆ ಎಂದು ಅರ್ಥ. ಒಂದು ಕೃತಿಯಷ್ಟೇ ಅಲ್ಲ, ಹಲವು ಕೃತಿಗಳ ಮೂಲಕ ಕಟ್ಟುತ್ತಿರುವ ಒಂದು ಇಡೀ ಕೃತಿಯನ್ನು ಅಭ್ಯಸಿಸಿದಾಗ ಕೃತಿಕಾರನ ಜೀವನ ದರ್ಶನ ಕಾಣುತ್ತದೆ. ನಮ್ಮ ಶ್ರೇಷ್ಠ ಸಾಹಿತಿಗಳಲ್ಲಿಯೂ ಅಷ್ಟೆ. ಒಂದೇ ಕೃತಿಯಲ್ಲಿ ಅವರ ದರ್ಶನ ಪೂರ್ತಿಯಾಗಿರುವುದಿಲ್ಲ. ಬೇರೆ ಬೇರೆ ಕೃತಿಗಳಲ್ಲಿ ಅವುಗಳನ್ನೇ ಬೆಳೆಸುತ್ತಿರುತ್ತಾರೆ. ತಾವು ಈ ಮೊದಲು ಹೇಳಿದ ಸಂಗತಿಗಳಿಗೆ ಮತ್ತೆ ಭೇಟಿ ನೀಡುತ್ತಿರುತ್ತಾರೆ. ಪುನರ್‌ವ್ಯಾಖ್ಯಾನ ಮಾಡಿ ಇನ್ನೊಂದು ನಿಲುವು